

# ‘ವರ್ಷದ ಕ್ರಿಕೆಟಿಗ’ ವಿರಾಟ್

**ಸ್ಫೋಟಕ ಬ್ಯಾಟಿಂಗ್‌ಗೆ ಹೆಸರಾಗಿರುವ ದೆಹಲಿಯ ವಿರಾಟ್ ಕೊಹ್ಲಿಯದ್ದು ಕ್ರಿಕೆಟ್‌ನ ಎಲ್ಲ ಮಾದರಿಗೂ ಒಗ್ಗುವ ಅದ್ಭುತ ಶೈಲಿ.**

■ ವಿಕ್ರಂ ಕಾಂತಿಕೆರೆ

### ₹ 15 ಕೋಟಿ ಸಂಭಾವನೆ

ಇಂಡಿಯನ್ ಪ್ರೀಮಿಯರ್ ಲೀಗ್ ನಲ್ಲಿ ಹೆಚ್ಚು ಸಂಭಾವನೆ ಪಡೆಯುವ ಆಟಗಾರ ಯಾರೆಂಬ ಪ್ರಶ್ನೆಗೆ ಈಗ ನೀಡಬೇಕಾದ ಉತ್ತರ: ವಿರಾಟ್ ಕೊಹ್ಲಿ. ಬೆಂಗಳೂರಿನ ರಾಯಲ್ ಚಾಲೆಂಜರ್ಸ್ ತಂಡವನ್ನು ಮುನ್ನಡೆಸುತ್ತಿರುವ ಅವರು ₹ 15 ಕೋಟಿ ಸಂಭಾವನೆ ಪಡೆಯುತ್ತಿರುವ ಆಟಗಾರ! ಮಹೇಂದ್ರ ಸಿಂಗ್ ದೋನಿ ಮತ್ತು ಶಿಖರ್ ಧವನ್‌ಗೆ ಫ್ರಾಂಚೈಸ್‌ಗಳು ನೀಡುವ ಸಂಭಾವನೆ ತಲಾ ₹ 12.5 ಕೋಟಿ.

### ಮೈಲಿಗಲ್ಲುಗಳು

- ★ ಏಕದಿನ ಕ್ರಿಕೆಟ್‌ನಲ್ಲಿ ವೇಗದ 1,000, 3,000 ಮತ್ತು 4,000 ರನ್ ಗಳಿಸಿದ ಭಾರತೀಯ ಆಟಗಾರ
- ★ 2010, 11 ಮತ್ತು 12ರಲ್ಲಿ ಏಕದಿನ ಕ್ರಿಕೆಟ್‌ನಲ್ಲಿ ಅತ್ಯಧಿಕ ರನ್ ಗಳಿಸಿದ ಭಾರತೀಯ ಆಟಗಾರ
- ★ ಏಕದಿನ ಕ್ರಿಕೆಟ್‌ನಲ್ಲಿ ವೇಗದ 10 ಶತಕ ಗಳಿಸಿದ ಆಟಗಾರ
- ★ ಏಕದಿನ ಕ್ರಿಕೆಟ್‌ನಲ್ಲಿ ಎರಡನೇ ವೇಗದ 5,000 ರನ್ ಗಳಿಸಿದ ದಾಖಲೆಯ ಜಂಟಿ ಒಡೆಯ (ಸರ್.ವಿವಿಯನ್ ರಿಚರ್ಡ್ಸ್ ಜೊತೆ)
- ★ ಐಪಿಎಲ್ ಆರನೇ ಆವೃತ್ತಿಯಲ್ಲಿ ಅತ್ಯಧಿಕ ರನ್ (16 ಪಂದ್ಯ, 634) ಗಳಿಸಿದ ಮೂರನೇ ಆಟಗಾರ

‘ವಿರಾಟ್ ಕೊಹ್ಲಿ’ ಆಟದ ಅಂಗಳದಲ್ಲಿ ಒಮ್ಮೊಮ್ಮೆ ಭಾವಾವೇಶಕ್ಕೆ ಒಳಗಾದಂತೆ ಕಾಣಿಸು ಆಟಗಾರ. ಆದರೂ ಹೊರಗೆ ಸಂಯಮ ಪ್ರದರ್ಶಿಸುವುದೂ ಈತನಿಗೆ ಗೊತ್ತು. ಪಂದ್ಯ ಪೂರ್ವ ಅಥವಾ ಪಂದ್ಯದ ನಂತರ ಮಾಧ್ಯಮಗೋಷ್ಠಿಯಲ್ಲಿ ಪತ್ರಕರ್ತರ ಪ್ರಶ್ನೆಗಳಿಗೆ ನಾಜೂಕಿನಿಂದ ಉತ್ತರಿಸುವ ಪ್ರಬುದ್ಧತೆಯನ್ನೂ ಆರ್ಜಿಸಿಕೊಂಡಿದ್ದಾರೆ. ಇಂಥ ಅಪರೂಪದ ವ್ಯಕ್ತಿತ್ವ ಅವರಿಗೆ ಬಹುಬೇಗ ಖ್ಯಾತಿ ತಂದುಕೊಡಲು ನೆರವಾಗಿದೆ ಎನ್ನಬಹುದು.

ವಿಶ್ವ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿ ಏಳು ವರ್ಷಗಳು ಕಳೆಯುವಷ್ಟರಲ್ಲಿ ಕ್ರಿಕೆಟ್‌ನ ಎರಡೂ ಪ್ರಕಾರಗಳಲ್ಲಿ ಭಾರತ ತಂಡವನ್ನು ಮುನ್ನಡೆಸಿರುವ ಅವರು, ಟೆಸ್ಟ್ ತಂಡದ ಪರಿಪೂರ್ಣ ನಾಯಕನಾಗಿ ಮೆರೆದಿದ್ದಾರೆ. ನಾಯಕತ್ವ ಆಕಸ್ಮಿಕವಾಗಿ ಹೆಗಲಿಗೇರಿದರೂ ಸಮರ್ಥವಾಗಿ ನಿಭಾಯಿಸಿ ಮೊದಲ ಪ್ರಯತ್ನದಲ್ಲೇ ಶ್ರೀಲಂಕಾ ನೆಲದಲ್ಲಿ ಸರಣಿ ಜಯದ ಕಾಣಿಕೆ ನೀಡಿ ಎರಡು ದಶಕಗಳಿಂದ ಈ ಗಳಿಗೆಗಾಗಿ ಕಾಯುತ್ತಿದ್ದ ಭಾರತದ ದಾಹ ತೀರಿಸಿದ್ದರು. ಟ್ವೆಂಟಿ– ಟ್ವೆಂಟಿ ಮತ್ತು ಏಕದಿನ ಕ್ರಿಕೆಟ್ ಸರಣಿಗಳನ್ನು ಗೆದ್ದು ಮಹೇಂದ್ರ ಸಿಂಗ್ ದೋನಿ ಬಳಗದ ಮುಂದೆ ದೈತ್ಯ ಶಕ್ತಿಯಾಗಿ ನಿಂತಿದ್ದ ದಕ್ಷಿಣ ಆಫ್ರಿಕಾ ತಂಡವನ್ನು ಟೆಸ್ಟ್ ಸರಣಿಯಲ್ಲಿ ಮಣಿಸಿದ್ದು ಕೊಹ್ಲಿ ನಾಯಕತ್ವ.

ಈ ಎಲ್ಲ ‘ಪ್ರತಿಭಾ ಪ್ರದರ್ಶನ’ದ ಬೆನ್ನಲ್ಲೇ ಈಗ ಅವರನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ನೀಡುವ ‘ವರ್ಷದ ಕ್ರಿಕೆಟಿಗ’ ಪ್ರಶಸ್ತಿ ಅರಸಿ ಬಂದಿದೆ. 2012ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿಯ (ಐಸಿಸಿ) ‘ವರ್ಷದ ಏಕದಿನ ಆಟಗಾರ’ ಎಂಬ ಪ್ರಶಸ್ತಿಗೆ ಪಾತ್ರರಾಗಿದ್ದ ಕೊಹ್ಲಿ ಆ ವರ್ಷ ಐಸಿಸಿ ವಾರ್ಷಿಕ ತಂಡದಲ್ಲೂ ಸ್ಥಾನ ಗಳಿಸಿದ್ದರು.

### ಫ್ಲ್ಯಾಷ್ ಬ್ಯಾಕ್

ಅದು 2015ರ ಭಾರತ – ದಕ್ಷಿಣ ಆಫ್ರಿಕಾ ಏಕದಿನ ಸರಣಿ. ಟ್ವೆಂಟಿ – ಟ್ವೆಂಟಿ ಸರಣಿಯ ಎರಡು ಪಂದ್ಯಗಳನ್ನು ಗೆದ್ದು ಬೀಗುತ್ತಿದ್ದ ದಕ್ಷಿಣ ಆಫ್ರಿಕಾ ಏಕದಿನ ಸರಣಿಯಲ್ಲೂ ಅದ್ಭುತ ಆರಂಭ ಪಡೆದಿರುವುದು ದೋನಿ ಬಳಗದ ಆತಂಕಕ್ಕೆ ಕಾರಣವಾಗಿತ್ತು. ಈ ಸಂದರ್ಭದಲ್ಲಿ ಎಲ್ಲರ ಗಮನ ಇದ್ದದ್ದು ಕೊಹ್ಲಿ ಕಡೆಗೆ. 2015ರ ವಿಶ್ವಕಪ್ ಟೂರ್ನಿಯ ನಂತರ ಬ್ಯಾಟಿಂಗ್ ವೈಫಲ್ಯ ಅನುಭವಿಸಿದ ಕೊಹ್ಲಿ ಲಯ ಕಂಡುಕೊಂಡರೆ ತಂಡ ಜಯದ ಹಾದಿಯಲ್ಲಿ ಮುನ್ನಡೆಯಬಹುದು ಎಂಬ ನಿರೀಕ್ಷೆ ಕ್ರಿಕೆಟ್ ಪ್ರಿಯರಿಗಿತ್ತು.

ವಿಶ್ವಕಪ್ ನಂತರದ 10 ಇನಿಂಗ್ಸ್‌ಗಳಲ್ಲಿ ಒಂದೇ ಒಂದು ಅರ್ಧಶತಕ ಗಳಿಸಲು ಸಾಧ್ಯವಾಗದೇ ಪರದಾಡುತ್ತಿದ್ದ ಕೊಹ್ಲಿ ಮೊದಲ ಎರಡು ಪಂದ್ಯಗಳಲ್ಲಿ ಗಳಿಸಿದ್ದು ಒಟ್ಟು 23 ರನ್ ಮಾತ್ರ. ರಾಜ್‌ಕೋಟ್‌ನಲ್ಲಿ ನಡೆದ ಮೂರನೇ ಪಂದ್ಯದಲ್ಲಿ ಅರ್ಧ ಶತಕ ಸಿಡಿಸಿದರು. ಚೆನ್ನೈನಲ್ಲಿ ನಾಲ್ಕನೇ ಪಂದ್ಯ–ದಲ್ಲಿ ಶತಕ ಬಾರಿಸಿ ರನ್ ಬರ ನೀಗಿಸಿದರು; ಟೆಸ್ಟ್‌ನಲ್ಲೂ ‘ಆಟ’ ಮುಂದುವರಿಸಿದರು. ಇದರ ಬೆನ್ನಲ್ಲೇ ವರ್ಷದ ಕ್ರಿಕೆಟಿಗರಾದರು.

### ಆ ವರ್ಷ...

ದೇಶೀಯ ಕ್ರಿಕೆಟ್‌ನಲ್ಲಿ ಮಿಂಚುತ್ತಿದ್ದ ದೆಹಲಿಯ ಯುವ ಆಟಗಾರ ಕೊಹ್ಲಿಯ ವೃತ್ತಿ ಜೀವನವನ್ನು ಬದಲಿಸಿದ್ದು 2008ನೇ ಇಸವಿ. ಭಾರತದ ಜೆರ್ಸಿ ತೊಡುವ ಅವರ ಕನಸು ನನಸಾದದ್ದು 2006ರಲ್ಲಿ. ಆ ವರ್ಷ 19 ವರ್ಷದೊಳಗಿನವರ ಟೂರ್ನಿಯಲ್ಲಿ ಆಡಿದ್ದ ಅವರು ಎರಡು ವರ್ಷಗಳ ನಂತರ ಈ ವಯೋಮಾನದವರ ವಿಶ್ವಕಪ್ ಅನ್ನು ದೇಶಕ್ಕೆ ಗೆಲ್ಲಿಸಿಕೊಟ್ಟರು. ಯುವತ್ವ ಪುಟಿದೇಳುವ ಕೊಹ್ಲಿ ಅದೇ ವರ್ಷ ಭಾರತ ತಂಡದಲ್ಲಿ ಸ್ಥಾನ ಪಡೆದರು.

2011ರ ವಿಶ್ವಕಪ್ ಗೆಲುವಿನಲ್ಲೂ ತಮ್ಮ ಪಾತ್ರವನ್ನು ನಿಭಾಯಿಸಿದರು. 2014ರ ಶ್ರೀಲಂಕಾ ವಿರುದ್ಧದ ಏಕದಿನ ಸರಣಿಯಲ್ಲಿ ಮಹೇಂದ್ರ ಸಿಂಗ್ ದೋನಿಗೆ ವಿಶ್ರಾಂತಿ ನೀಡಿದಾಗ ತಂಡದ ನಾಯಕತ್ವವನ್ನು ನಿಭಾಯಿಸಿದರು. ಮುಂದಿನ ವರ್ಷ ಟೆಸ್ಟ್‌ಗೆ ದೋನಿ ದಿಢೀರ್ ನಿವೃತ್ತಿ ಘೋಷಿಸಿದಾಗ ಈ ಜವಾಬ್ದಾರಿಯನ್ನು ಕೊಹ್ಲಿ ಹೆಗಲಿಗೇರಿಸಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಆಡಳಿತಕ್ಕೆ ಹೆಚ್ಚು ಯೋಚಿಸಬೇಕಾದ ಅಗತ್ಯವೇ ಇರಲಿಲ್ಲ.

ಅದು 2008ರ ಶ್ರೀಲಂಕಾ ವಿರುದ್ಧದ ಏಕದಿನ ಸರಣಿ. ಗಾಯಗೊಂಡಿದ್ದ ಆರಂಭಿಕ ಆಟಗಾರರಾದ ಸಚಿನ್ ತೆಂಡೂಲ್ಕರ್ ಮತ್ತು ವೀರೇಂದ್ರ ಸೆಹ್ವಾಗ್ ಆ ಸರಣಿಯಲ್ಲಿ ಆಡಲಿಲ್ಲ. ಆಗ ಇನಿಂಗ್ಸ್ ಆರಂಭಿಸುವ ಜವಾಬ್ದಾರಿ ಕೊಹ್ಲಿ ಹೆಗಲಿಗೆ ಏರಿಸಲಾಯಿತು. ಐದು ಪಂದ್ಯಗಳ ಸರಣಿಯುದ್ದಕ್ಕೂ ಮೊದಲಿಗರಾಗಿ ಕ್ರೀಸ್‌ಗೆ ಇಳಿದ ಅವರು ನಾಲ್ಕನೇ ಪಂದ್ಯದಲ್ಲಿ ಅರ್ಧ ಶತಕ ಗಳಿಸಿ ಮಿಂಚಿದರು; ಸರಣಿ ಜಯದ ಸವಿಯನ್ನೂ ಉಂಡರು.

ಸೆಹ್ವಾಗ್ ಮತ್ತು ಸಚಿನ್ ತಂಡಕ್ಕೆ ಮರಳಿದ ನಂತರ ಕೊಹ್ಲಿಗೆ ನಿಜವಾದ ಸತ್ವ ಪರೀಕ್ಷೆ ಕಾದಿತ್ತು. ಅತ್ಯಂತ ಪೈಪೋಟಿ ಇದ್ದ ಕಾರಣ ಇಂಗ್ಲೆಂಡ್ ಪ್ರವಾಸದ ಸಂದರ್ಭದಲ್ಲಿ ಆಡಲು ಅವಕಾಶ ಸಿಗಲಿಲ್ಲ. ಆದರೆ ದೇಶಿ ಕ್ರಿಕೆಟ್‌ಗೆ ಮರಳಿದ ಅವರು ಭರ್ಜರಿ ಬ್ಯಾಟಿಂಗ್ ಪ್ರದರ್ಶಿಸಿ 2009ರ ಚಾಂಪಿಯನ್ಸ್ ಟ್ರೋಫಿ ಟೂರ್ನಿ ವೇಳೆ ತಂಡದಲ್ಲಿ ಸ್ಥಾನ ಗಳಿಸಿದರು. ಮಧ್ಯಮ ಕ್ರಮಾಂಕದಲ್ಲಿ ಸ್ಥಾನ ಭದ್ರಗೊಳ್ಳಲು ಆಗಲೇ ವೇದಿಕೆ ಸಜ್ಜಾಗಿತ್ತು. ಆಸ್ಟ್ರೇಲಿಯಾ ತಂಡ ಭಾರತ ಪ್ರವಾಸ ಮಾಡಿದಾಗಲೂ ಮಧ್ಯಮ ಕ್ರಮಾಂಕಕ್ಕೆ ಶಕ್ತಿ ತುಂಬಿದರು. ಏಳು ಪಂದ್ಯಗಳಲ್ಲಿ 398 ರನ್ ಸೇರಿಸಿ ಟೂರ್ನಿಯ ಹೆಚ್ಚು ರನ್ ಗಳಿಸಿದ ಆಟಗಾರರಾದರು.

ಇದು, ಭಾರತ ಕ್ರಿಕೆಟ್‌ನಲ್ಲಿ ಹೊಸ ತಾರೆಯೊಂದರ ಉದಯಕ್ಕೆ ಕಾರಣವಾಯಿತು. ಮೂರನೇ ಕ್ರಮಾಂಕದ ಬಲಿಷ್ಠ ಆಟಗಾರ ಎಂದು ಕರೆಸಿಕೊಂಡ ಕೊಹ್ಲಿ 2011ರ ವಿಶ್ವಕಪ್‌ನ ಮೊದಲ ಪಂದ್ಯದಲ್ಲೇ ಶತಕ ಸಿಡಿಸಿ ಚೊಚ್ಚಲ ವಿಶ್ವಕಪ್ ಪಂದ್ಯದಲ್ಲಿ ಈ ಸಾಧನೆ ಮಾಡಿದ ಮೊದಲ ಭಾರತೀಯ ಎಂಬ ಹೆಸರು ತಮ್ಮದಾಗಿಸಿಕೊಂಡರು. 27ರ ಹರೆಯದ ಈ ಆಟಗಾರನ ನಂತರದ ಹಾದಿಯುದ್ದಕ್ಕೂ ಹೂಗಳು ಅರಳಿ ನಿಂತವು. ಭಾರತ ತಂಡ ಏಳು–ಬೀಳು ಕಂಡರೂ ಕೊಹ್ಲಿ ಮಿಂಚಿದರು. ಸಚಿನ್ ನಿವೃತ್ತಿಯ ಅಂಚಿನಲ್ಲಿದ್ದಾಗ ಉದಯಿಸಿದ ಈ ನವತಾರೆ ಎಲ್ಲ ವಯೋಮಾನದವರ ಹೃದಯ ಗೆದ್ದರು.

ಕೊಹ್ಲಿ ಸ್ಫೋಟಕ ಆಟಗಾರ. ಅಂಗಳದಲ್ಲಿ ತಮ್ಮ ಹಾವ–ಭಾವದೊಂದಿಗೆ ಪ್ರೇಕ್ಷಕರಲ್ಲಿ ರೋಮಾಂಚನ ಮೂಡಿಸುವಂಥವರು. ಗ್ಯಾಲರಿಯಲ್ಲಿರುವ ಹೆಂಗಳೆಯರ ಮನ ಹಾಗೂ ಮೈಯಲ್ಲಿ ಕಚಗುಳಿ ಉಂಟುಮಾಡುವ ಆಟಗಾರನೂ ಹೌದು.